# ಟ್ರೂ ಕಾಲ್ ದಾರಿಯಲ್ಲಿ ಗೂಗಲ್

■ ಶಶಿಕಕುಮಾರ್ ಸಿ.

ಕಿರಿಕಿರಿ ಉಂಟು ಮಾಡುವ ಸ್ಪಾಮ್ ಕಾಲ್‌ಗಳ ಪತ್ತೆಗೆ ಟ್ರೂ ಕಾಲರ್ ಮಾದರಿಯಲ್ಲಿ ಗೂಗಲ್ ಕಂಪನಿಯು 'ಗೂಗಲ್ ಫೋನ್ ವೆರಿಫೈಡ್ ಕಾಲ್ಸ್ ಫೀಚರ್' ಅನ್ನು ಪರಿಚಯಿಸಲು ಮುಂದಾಗಿದೆ. ಈ ಬಗ್ಗೆ ಟ್ವಿಟರ್ ಮೂಲಕ್ ಮಾಹಿತಿ ಹಂಚಿಕೊಂಡಿರುವ ಗೂಗಲ್, ಮುಂದಿನ ಕೆಲವು ದಿನಗಳಲ್ಲಿಯೇ ಈ ಆಯ್ಕೆಯನ್ನು ಗ್ರಾಹಕರ ಬಳಕೆಗೆ ಮುಕ್ತಗೊಳಿಸುವುದಾಗಿ ತಿಳಿಸಿದೆ.

ಈ ಆಯ್ಕೆಯು ವಿಶೇಷವಾಗಿ ಸ್ಪಾಮ್ ಕರೆಗಳ ಮೇಲೆ ನಿಗಾ ವಹಿಸಲಿದ್ದು, ಗ್ರಾಹಕರಿಗೆ ಅನಗತ್ಯ ಕಿರಿಕಿರಿ ಉಂಟುಮಾಡುವ ಕರೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ. ಆ್ಯಂಡ್ರಾಯ್ಡ್ ಆಧಾರಿತ ಆಪರೇಟಿಂಗ್ ಸಿಸ್ಟಂನಲ್ಲಿ ಲಭ್ಯವಾಗುವ ಗೂಗಲ್ ಕಾಂಟ್ಯಾಂಕ್ಟ್ಸ್ ಆ್ಯಪ್‌ನಲ್ಲಿ ಮಾತ್ರ ಈ ಆಯ್ಕೆಯು ಲಭ್ಯವಾಗುತ್ತದೆ. ಭಾರತ ಮಾತ್ರವಲ್ಲದೆ, ಅಮೆರಿಕ, ಮೆಕ್ಸಿಕೋ, ಬ್ರೆಝಿಲ್ ಮತ್ತು ಸ್ಪೇನ್‌ನಲ್ಲಿ ಈ ಫೀಚರ್ ಪ್ರಾಯೋಗಿಕವಾಗಿ ಜಾರಿಗೆ ತರಲಿದೆ.

ಟ್ರೂಕಾಲರ್ ಮಾದರಿಯಲ್ಲೇ ಆ್ಯಂಡ್ರಾಯ್ಡ್ ಬಳಕೆದಾರರು ಸ್ಪಾಮ್ ಕರೆಗಳನ್ನು ಗೂಗಲ್ ಫೀಚರ್ ಮೂಲಕ ನಿಯಂತ್ರಿಸಬಹುದು. ಬೇಡವಾದ ಕರೆಗಳನ್ನು ತಿರಸ್ಕರಿಸುವ ಆಯ್ಕೆಯನ್ನು ಇದು ಒದಗಿಸುತ್ತದೆ. ಜೊತೆಗೆ ರಿಪೋರ್ಟ್ ಮಾಡುವ ಆಯ್ಕೆಯನ್ನು ಬಳಕೆದಾರರು ಪಡೆಯಬಹುದು.




'ಬ್ಯುಸಿನೆಸ್ ವೆರಿಫೈ ಆಯ್ಕೆ' ಕೂಡ ಇದ್ದು, ನೈಜ ಕರೆಗಳನ್ನು ಗ್ರಾಹಕರು ದೃಢೀಕರಿಸಬಹುದು. ಅನಗತ್ಯ ಕರೆಗಳನ್ನು ತಿರಸ್ಕರಿಸಬಹುದು. 'ವೆರಿಫೈಡ್ ಕಾಲ್'ನಲ್ಲಿ ಆಂಡ್ರಾಯ್ಡ್ ಬಳಕೆದಾರರು ಕರೆ ಮಾಡಿದವರ ಹೆಸರು, ಲೋಗೋ (ಕಂಪನಿಗಳ ಕರೆಯಾದರೆ) ಮತ್ತು ಕಂಪನಿಯ ಕರೆಯಾಗಿದ್ದಲ್ಲಿ ಕರೆ ಮಾಡಿರುವ ಕಾರಣವನ್ನು ತಿಳಿದುಕೊಳ್ಳಬಹುದು. ಅದನ್ನು ಗೂಗಲ್ ದೃಢೀಕರಿಸಿದ್ದರೆ ನಿಮಗೆ ಮಾಹಿತಿ ದೊರೆಯುತ್ತದೆ.

ಕರೆ ಅನಗತ್ಯವಾದುದಾದರೆ ಸ್ಪಾಮ್ ಕರೆ ಅಲರ್ಟ್ ತೋರಿಸುತ್ತದೆ. ಹಾಗೆಯೇ ಅದನ್ನು ಬ್ಲಾಕ್ ಲಿಸ್ಟ್‌ಗೆ ಹಾಕುವ ಅವಕಾಶವನ್ನೂ ಒದಗಿಸಲಿದೆ. ಅನಗತ್ಯ ಕರೆಗಳ ಸಮಸ್ಯೆಯಿಂದ ಪಾರಾಗಲು ಈ ಆಯ್ಕೆ ಸೂಕ್ತವೆನಿಸಲಿದೆ. ಅಧಿಕೃತವಲ್ಲದ ಸಂಖ್ಯೆಗಳಿಂದ ಕರೆ ಬಂದರೆ ಅದನ್ನು ಮುಂಚಿತವಾಗಿಯೇ ಗುರುತಿಸಿ ಅಂತಹ ಕರೆಗಳ ಬಗ್ಗೆ ಬಳಕೆದಾರರಿಗೆ ಎಚ್ಚರಿಕೆ ನೀಡುತ್ತದೆ. ಈ ಬಗ್ಗೆ ಗೂಗಲ್ ತನ್ನ ಬ್ಲಾಗ್ ಖಾತೆಯಲ್ಲಿ ಸವಿವರವಾದ ಮಾಹಿತಿಯನ್ನು ಹಂಚಿಕೊಂಡಿದೆ. ■

## ವಿಡಿಯೊ ಕಾನ್ಫರೆನ್ಸ್‌ನತ್ತ ಜಿಯೊ

ವಿಡಿಯೊ ಕಾಲಿಂಗ್ ಅಪ್ಲಿಕೇಷನ್ ಝೂಮ್, ಗೂಗಲ್ ಮೀಟ್ ಮತ್ತು ಮೈಕ್ರೋಸಾಫ್ಟ್ ಮೀಟ್ಸ್ ಸೇರಿದಂತೆ ಹಲವು ಆ್ಯಪ್‌ಗಳಿಗೆ ಸ್ಪರ್ಧೆ ಒಡ್ಡಲು ರಿಲಯನ್ಸ್ ಕಮ್ಯುನಿಕೇಷನ್ ಕಂಒನಿಯು 'ಜಿಯೊ ಮೀಟ್ ಎಚ್‌ಡಿ' ಎಂಬ ಹೊಸ ಆ್ಯಪ್ ಪರಿಚಯಿಸಿದೆ.

ಲಾಕ್‌ಡೌನ್ ಬಳಿಕ ವರ್ಕ್ ಫ್ರಮ್ ಹೋಮ್‌ಗೆ ಬಹುತೇಕ ಕಂಪನಿಗಳು ಒತ್ತು ನೀಡಿದ್ದು, ಉದ್ಯೋಗಿಗಳು ಮನೆಯಿಂದಲೇ ಕೆಲಸ ನಿರ್ವಹಿಸುವ ಅನಿವಾರ್ಯತೆಯಿದೆ. ಕಂಪನಿಗಳ ಕಾರ್ಯ ನಿರ್ವಹಣೆಗೆ ಅನುಗುಣವಾಗಿ ವಿಡಿಯೊ ಕಾನ್ಫರೆನ್ಸ್ ಅಗತ್ಯ. ಹೀಗಾಗಿ ವಿಡಿಯೊ ಕಾನ್ಫರೆನ್ಸ್ ಆ್ಯಪ್‌ಗಳಿಗೆ ಬೇಡಿಕೆ ಹೆಚ್ಚಿತ್ತು. ಈ ಸಂದರ್ಭವನ್ನು ಉಪಯೋಗಿಸಿಕೊಂಡ ರಿಲಯನ್ಸ್ ಕಮ್ಯುನಿಕೆಷನ್ ಈ ದೇಸಿ ಆ್ಯಪ್ ಅನ್ನು ಪರಿಚಯಿಸಿದೆ.

ಬಳಕೆ ಹೇಗೆ?




ಜಿಯೊ ಮೀಟ್ ಬಳಕೆದಾರರು ತಾವು ಕಾರ್ಯನಿರ್ವಹಿಸುವ ಕಂಪನಿಯ ಡೊಮೈನ್ ಐಡಿ ಅಥವಾ ಜಿಮೇಲ್ ಮೂಲಕ 'ಜಿಯೊಮೀಟ್'ಗೆ ಲಾಗಿನ್ ಆಗಬಹುದು.

ಜಿಯೊಮೀಟ್ ಆ್ಯಪ್ ತೆರೆಯಿರಿ, ಅಥವಾ ಕಂಪ್ಯೂಟರ್‌ನಲ್ಲಿ https://www.jiomeetpro.jio.com ತೆರೆಯಿರಿ. ಸೈನ್ ಇನ್ ಮಾಡಿ. ಕಂಪನಿ ಡೊಮೈನ್ ಕ್ಲಿಕ್ ಮಾಡಿ. ಡೊಮೈನ್ ಐಡಿ/ಇಮೇಲ್ ಅಡ್ರೆಸ್ ಕ್ಲಿಕ್ ಮಾಡಿ. ಡೊಮೈನ್ ಐಡಿ ಇಲ್ಲವಾದರೆ, ಇ ಮೇಲ್ ಐಡಿ ಬಳಸಿ ಲಾಗಿನ್ ಆಗಬಹುದು. ವಿಡಿಯೊ ಕಾಲ್, ಟೀಮ್ ಮೀಟಿಂಗ್, ಕಾನ್ಫರೆನ್ಸ್ ನಡೆಸಲು ಜಿಯೋಮೀಟ್ ಸೂಕ್ತವಾಗಿದೆ.

ವಿಶೇಷಗಳು

- ದೇಸಿ ವಿಡಿಯೊ ಕಾಲ್ ಆ್ಯಪ್ ಮತ್ತು ಅತ್ಯಂತ ಹೆಚ್ಚು ಸುರಕ್ಷಿತ ಎಂದು ಕಂಪನಿ ಹೇಳಿದೆ.
- ಒಮ್ಮೆಗೆ 100 ಮಂದಿಯೊಂದಿಗೆ ವಿಡಿಯೊ ಕರೆ. ಅಷ್ಟೂ ಮಂದಿ ಮೀಟಿಂಗ್‌ನಲ್ಲಿ ಭಾಗವಹಿಸಬಹುದು.

ಡೌನ್‌ಲೋಡ್ ಹೇಗೆ?

ಈ ಆ್ಯಪ್ ಗೂಗಲ್ ಪ್ಲೇ ಸ್ಟೋರ್ ಹಾಗೂ ಆ್ಯಪಲ್ ಸ್ಟೋರ್‌ನಲ್ಲಿ ಲಭ್ಯ. ಡೆಸ್ಕ್‌ಟಾಪ್ ಬಳಕೆದಾರರು www.jiomeetpro.jio.com ಮೂಲಕ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ■

ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.